5. ದೊಡ್ಡ ಬಳ್ಳಾಪುರ - 49
6. ನೆಲಮಂಗಲ - 47
7. ರಾಮನಗರ - 28
8. ಮಾಗಡಿ - 21

ಆ) ಅಂತಹ ಪ್ರಕರಣಗಳು ಯಾವುದೂ ಇಲ್ಲ.

ಇ) ಇಂತಹ ಪ್ರಕರಣಗಳು ಇರುವುದಿಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಬ್ರಹ್ಮಾವರದಲ್ಲಿ ಕಟ್ಟಿಗೆ ಡಿಪೋ ಕುರಿತು

632 - ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಯಾವ ಯಾವ ಸ್ಥಳಗಳಲ್ಲಿ ಸರ್ಕಾರಿ ಕಟ್ಟಿಗೆ ಡಿಪೋ ಅನುಕೂಲತೆ ಲಭ್ಯವಿರುತ್ತದೆ.

ಆ) ಬ್ರಹ್ಮಾವರದ ಪರಿಸರದಲ್ಲಿ ಸಾರ್ವಜನಿಕರಿಗೆ ಉರುವಲು ಕಟ್ಟಿಗೆ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಲ್ಲಿ ಕಟ್ಟಿಗೆ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಈ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ ಕಟ್ಟಿಗೆ ಡಿಪೋ ಇರುತ್ತದೆ.

ಆ) ಬಂದಿದೆ.

ಇ) ಈ ಕೆಳಕಂಡ ಕಾರಣಗಳಿಂದ ಬ್ರಹ್ಮಾವರದಲ್ಲಿ ಕಟ್ಟಿಗೆ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರವು ಪರಿಗಣಿಸುತ್ತಿಲ್ಲ ಅರಣ್ಯ ವೃಕ್ಷ ಸಂರಕ್ಷಣಾ ಕಾಯಿದೆಯ ಪ್ರಕಾರ ಹಿಡುವಳಿದಾರರು 5 ಟನ್ ಸೌದೆ ಪೂರ್ವಾನುಮತಿ ಇಲ್ಲದೆ ಸ್ವಂತ ಉಪಯೋಗಕ್ಕೆ ಕಡಿಯಲು ಅವಕಾಶವಿರುವುದರಿಂದ, ಮತ್ತು ದರಖಾಸ್ತು ಮತ್ತು ಇತರ ಕಾರಣಗಳಿಂದ ಮರಗಳ ಕಡಿತಲೆಯಾಗಿ ಆದರಿಂದ ಬರುವ ಸೌದೆ ಮಾರುಕಟ್ಟೆಗೆ ಬರುತ್ತಿರುವುದರಿಂದ ಹಾಗೂ ಈಗಿನ ಸರ್ಕಾರದ ಅರಣ್ಯ ಸಂರಕ್ಷಣಾ ನೀತಿಯ ಪ್ರಕಾರ ಕಾದಿಟ್ಟ ಅರಣ್ಯ ಪ್ರದೇಶದಿಂದ ಹಸಿ ಮರಗಳನ್ನು ಕಡಿಯುವುದು ಸಂಪೂರ್ಣ ನಿಷೇಧಿಸಲ್ಪಟ್ಟು ಕೇವಲ ಸತ್ತು ಬಿದ್ದ ಮರಗಳನ್ನು ಮಾತ್ರ ಅರಣ್ಯ ಪ್ರದೇಶಗಳಿಂದ ಡಿಪೋಗಳಿಗೆ ತರುತ್ತಿರುವುದರಿಂದ ಉರುವಲು ಕಟ್ಟಿಗೆ ಉತ್ಪಾದನೆ ಅತ್ಯಂತ ಕಡಿಮೆಯಾಗಿ ಬ್ರಹ್ಮಾವರದಲ್ಲಿಯೇ ಆಗಲಿ ಅಥವಾ ಇನ್ನಿತರ ಸ್ಥಳಗಳಲ್ಲಿಯೇ ಆಗಲಿ ಹೊಸ ಸೌದೆ ಡಿಪೋಗಳನ್ನು ತೆರೆಯುವ ವಿಚಾರವು ಸರ್ಕಾರ ಪರಿಶೀಲಿಸುತ್ತಿಲ್ಲ.

ಆಹಾರ ಮತ್ತು ನಾಗರೀಕ ಪೂರೈಕೆ ಬಗ್ಗೆ

646 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಆಹಾರ ಪದಾರ್ಥಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಿಸುತ್ತಿರುವದರಿಂದ ಸಾಕಷ್ಟು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಆಹಾರ ಸಾಮಾಗ್ರಿಗಳ ವಿತರಣೆಯನ್ನು ನ್ಯಾಯಬೆಲೆ ಅಂಗಡಿಗಳವರಿಂದ ಹಿಂದಕ್ಕೆ ಪಡೆದು ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಿಸಲು ಸರ್ಕಾರ ಉದ್ದೇಶಿಸಿದೆಯೇ?

3) ಹಾಗಿದ್ದಲ್ಲಿ ಅದನ್ನು ಕಟ್ಟುನಿಟ್ಟಾಗಿ ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1) ಬಂದಿರುತ್ತದೆ.

2) ಸದ್ಯಕ್ಕೆ ಇರುವುದಿಲ್ಲ

3) ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್.ಟಿಡಿ 57 : ಡಿಆರ್‌ವಿ. : 90 ದಿ. 8-11-90ರ ಪ್ರಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿರುವುದರಿಂದ ಆಹಾರ ಪೂರೈಕೆ ವಿಚಾರದಲ್ಲಿ ಜಿಲ್ಲಾಧಿಕಾರಿಗಳೇ ಅಧಿಕಾರ ಹೊಂದಿರುವುದರಿಂದ ಕಟ್ಟುನಿಟ್ಟಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪಡಿತರ ವಿತರಣೆಯು ಸರಿಯಾಗಿ ಮಾಡಿಸುವ ವಿಚಾರದಲ್ಲಿ ಆದೇಶಗಳನ್ನು ನೀಡಲಾಗಿದೆ. ಮತ್ತು ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ಪಡಿತರ ಪದಾರ್ಥಗಳನ್ನು ಎತ್ತುವಳಿ ಮಾಡದಿದ್ದಲ್ಲಿ ಮತ್ತು ಹಂಚಿಕೆ ಮಾಡುವಲ್ಲಿ ವಿಫಲವಾದಲ್ಲಿ ಅಂಥಹವರ ಮೇಲೆ ಸೂಕ್ತ ಕ್ರಮ ಕೈಗೊಂಡು ಅವರುಗಳ ಅಂಗಡಿ ರದ್ಧತಿ ಮಾಡಲು ನೀಡಿದ ಆದೇಶದಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

ಕರ್ನಾಟಕ ರಾಜ್ಯದಲ್ಲಿರುವ ಸಹಕಾರ ಸಂಘಗಳು

676 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಸಹಕಾರ ಸಂಘಗಳೆಷ್ಟು?

ಆ) ಕಾರ್ಯನಿರ್ವಹಿಸುತ್ತಿರುವುಗಳ ಪೈಕಿ ಲಾಭಗಳಿಸುತ್ತಿರುವ ಸಹಕಾರ ಸಂಘಗಳೆಷ್ಟು?

ಇ) ಹೆಚ್ಚು ನಷ್ಟವನ್ನು ಹೊಂದಿರುವ ಸಹಕಾರ ಸಂಘಗಳ ಪುರ್ನನಿರ್ಮಾಣಕ್ಕಾಗಿ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಅನುಸರಿಸುತ್ತಿದೆ?

ಶ್ರೀ ಕೆ.ಪಿಚ್. ಪಾಟೀಲ್ (ಸಹಕಾರ ಸಚಿವರು) :

	1988-89	1989-90	1990-91
ಅ)	25187	25709	26629
ಆ)	11507	11514	11523

ಇ) ಹೆಚ್ಚು ನಷ್ಟವನ್ನು ಹೊಂದಿರುವ ಸಹಕಾರ ಸಂಘಗಳಿಗೆ ಷೇರು ಧನ, ದುಡಿಯುವ ಬಂಡವಾಳ ಕೊಡುವ ಮೂಲಕ ಪುನಶ್ಚೇತನ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಇದರ ಜೊತೆಗೆ ಆಡಳಿತ ದಕ್ಷತೆ ಹೆಚ್ಚಿಸಲು ಸಹ ಕ್ರಮ ಕೈಗೊಳ್ಳಲಾಗಿದೆ.

ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ತಿದ್ದುಪಡಿ

419 - ಶ್ರೀ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸರ್ಕಾರವು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತರಲು ಉದ್ದೇಶಿಸಿದೆಯೇ?